# IN THE COURT OF THE ADDL. SENIOR CIVIL JUDGE & JMFC., GUBBI

## MVC- 981/2024

Witness present and duly sworn on : 10.10.2025.

**Cross Examination: by Counsel for Respondent:**

ನನಗೆ 70 ವರ್ಷ ವಯಸ್ಸಾ ಗಿದೆ ಎಂದರೆ 60 ವರ್ಷ ಆಗಿದೆ. ನಾನು ವಿಧ್ಯಾಭ್ಯಾಸ ಮಾಡಿಲ್ಲ ನನ್ನ ಜನ್ಮ ದಿನಾಂಕಃ 01.06.1967. ನನಗೆ ಬಿ.ಪಿ ಮತ್ತು ಶುಗರ್ ಇದೆ ಎಂದರೆ ಸರಿಯಲ್ಲ. ಕಾರ್ಪೆಂಟರ್ ಹೆಲ್ಪರ್ ಕೆಲಸ ಮಾಡುತ್ತಿದ್ದೆ. ನಾನು ಸದರಿ ಕೆಲಸ ಮಾಡುತ್ತಿರಲಿಲ್ಲ ಹಾಗೂ ನನಗೆ ತಿಂಗಳಿಗೆ ರೂ.25,000/- ಆದಾಯ ಇರಲಿಲ್ಲ ಎಂದರೆ ಸರಿಯಲ್ಲ.

ನಾನು ಅಪಘಾತ ಆದ ದಿನದಂದು ನಾನು ಬೆಂಗಳೂರಿನಿಂದ ಬಸ್ ನಲ್ಲಿ ಗುಬ್ಬಿಗೆ ಬಂದು ಗುಬ್ಬಿಯ ಬಸ್ ನಿಲ್ದಾಣದಿಂದ ನಮ್ಮ ಊರಾದ ಹಳೇಗುಬ್ಬಿಗೆ ಹೋಗಲು ರಸ್ತೆ ದಾಟುತ್ತಿದ್ದೇನು. ಅಪಘಾತ ಸ್ಥಳ ರಾಷ್ಟ್ರೀಯ ಹೆದ್ದಾರಿ ಮತ್ತು ಹಲವಾರು ವಾಹನಗಳು ಓಡಾಡುತ್ತವೆ ಎಂದರೆ ಸರಿಯಲ್ಲ. ಬಸ್ ಇಳಿದು ಬರುವಾಗ ರಸ್ತೆಯಲ್ಲಿ ತಿಪಟೂರು ಕಡೆಯಿಂದ ಒಂದು ಕಾರ್ ವೇಗದಿಂದ ಬಂದಿತು ಎಂದರೆ ಸರಿಯಲ್ಲ. ಸದರಿ ಕಾರ್ ನನಗೆ ಗುದ್ದುತ್ತದೆ ಎಂದು ತಪ್ಪಿಸಿಕೊಳ್ಳಲು ನಾನು ಬಸ್ಸ್ಟಾಂಡ್ ಒಳಗಡೆ ನುಗ್ಗಿದೆನು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಬಸ್ ಸ್ಟಾಂಡ್ ನಿಂದ ತಿಪಟೂರು ಕಡೆಗೆ ಹೋಗಲು ಬಸ್ ನಿಧಾನವಾಗಿ ಬರುತ್ತಿತ್ತು ಎಂದರೆ ಸರಿಯಲ್ಲ. ನಾನು ಸದರಿ ಬಸ್ ಗೆ ಡಿಕ್ಕಿಪಡಿಸಿಕೊಂಡೆನು ಎಂದರೆ ಬಸ್ ನನಗೆ ಡಿಕ್ಕಿ ಪಡಿಸಿರುತ್ತದೆ. ನಾನು ಬಿದ್ದು ಗಾಯ ಪಡಿಸಿಕೊಂಡಾಗ ಸದರಿ ಬಸ್ ನ ಕಂಡಕ್ಟರ್ ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಚಾಲಕ ಮತ್ತು ಕಂಡಕ್ಟರ್ ಬರಲಿಲ್ಲ ನನಗೆ ಪರಿಚಯ ಇದ್ದ ಸಂಭಂದಿ ಆಸ್ಪತ್ರೆಗೆ ಕರೆದುಕೊಂಡು ಹೋದರು.

ನಾನು ಮೊದಲಿಗೆ ಗುಬ್ಬಿಯ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ನಂತರ ತುಮಕೂರಿನ ಆದಿತ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನನಗೆ ಶಸ್ತ್ರ ಚಿಕಿತ್ಸೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ರೂ.1 ಲಕ್ಷ ಮತ್ತು ಮುಂದುವರೆದ ಚಿಕಿತ್ಸೆಗೆ

ಪ್ರತಿಬಾರಿ ಆಸ್ಪತ್ರೆಗೆ ಹೋದಾಗ ರೂ.2000-3000/- ಖರ್ಚು ಮಾಡುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಆಗಿರುವ ಗಾಯಗಳು ಗುಣಮುಖವಾಗಿವೆ ಹಾಗೂ ನಾನು ಆರಾಮಾಗಿ ಇದ್ದೇನೆಂದರೆ ಸರಿಯಲ್ಲ.

ನಾನು ಸೃಷ್ಟಿಸಿರುವ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ಔಷಧಿಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಆಧಾರ್ ಕಾರ್ಡ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ಬಸ್ಟಾಂಡ್ ನಲ್ಲಿ ಬಿದ್ದು ಗಾಯಪಡಿಸಿಕೊಂಡಿದ್ದ ಕಾರಣ ನನಗೆ KSRTC ಇಲಾಖೆಯವರು ಮಾನವಿಯತೆ ದೃಷ್ಟಿಯಿಂದ ರೂ.20,000/- ಹಣ ನೀಡಿದ್ದಾರೆಂದರೆ ಸರಿಯಲ್ಲ. ಗಿರೀಶ್ ಎಂದರೆ ನನ್ನ ತಮ್ಮ. ಸದರಿ ಗೀರಿಶ್ ರವರು KSRTC ಇಲಾಖೆಯ ರವರಿಂದ ರೂ.20,000/- ಪಡೆದಿದ್ದಾರೆಂದರೆ ಸರಿಯಲ್ಲ. ನಾನು ಗಾಯಪಡಿಸಿಕೊಂಡಿದ್ದು ಸದರಿ ಗಾಯಕ್ಕೆ KSRTC bus ಚಾಲಕನ ಅಜಾಗರೂಕತನ ಕಾರಣ ಅಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು KSRTC bus driver ನ ಮೇಲೆ ಸುಳ್ಳು ದೂರು ಕೊಟ್ಟಿದ್ದೇನೆಂದರೆ ಸರಿಯಲ್ಲ.

**Re-examination: Nil**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi